ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ

**KARNATAKA LEGISLATIVE ASSEMBLY, RESEARCH AND REFERENCE BRANCH**

**ಪತ್ರಿಕಾ ತುಣುಕುಗಳು**

**PAPER CLIPPINGS**

49

ಇಲಾಖೆ / ವಿಷಯ : DEPARTMENT / SUBJECT: ಇತರೆ ರಾಜ್ಯ ವಿಧಾನಸಭೆ ಅಧಿವೇಶನ

ಪತ್ರಿಕೆಯ ಹೆಸರು : NAME OF THE NEWS PAPER: ವಿಜಯ ಕರ್ನಾಟಕ ದಿನಾಂಕ : DATE : 16/3/21

## ಇಂಡಿಯಾ ನ್ಯೂಸ್

### ಟಿ-ಶರ್ಟ್‌ನಲ್ಲಿ ಸದನಕ್ಕೆ ಬಂದಿದ್ದ ಶಾಸಕನನ್ನು ಹೊರ ಹಾಕಿದ ಸ್ಪೀಕರ್

**ಗಾಂಧಿನಗರ:** ಗುಜರಾತ್‌ನಲ್ಲಿ ಸೋಮವಾರ ವಿಧಾನಸಭೆಗೆ ಟಿ-ಶರ್ಟ್ ಧರಿಸಿ ಬಂದಿದ್ದಕ್ಕಾಗಿ ಕಾಂಗ್ರೆಸ್ ಶಾಸಕ ವಿಮಲ್



ಚುಡಾಸಮ ಅವರನ್ನು ಸದನದಿಂದ ಹೊರಹಾಕಲಾಗಿದೆ. ಚುಡಾಸಮ ಟಿ-ಶರ್ಟ್‌ನಲ್ಲಿ ಬಂದಿದ್ದನ್ನು ಗಮನಿಸಿ ಕೋಪಗೊಂಡ ಸ್ಪೀಕರ್ ರಾಜೇಂದ್ರ ತ್ರಿವೇದಿ ಅವರು, ಚುಡಾಸಮ ಅವರನ್ನು ಸದನದಿಂದ ಹೊರಹೋಗುವಂತೆ ಆದೇಶಿಸಿದರು. ''ಸದನವೆಂದರೆ ಆಟದ ಮೈದಾನವಲ್ಲ, ಪ್ರತಿಯೊಬ್ಬ ಸದಸ್ಯರೂ ಶಿಸ್ತು ಹಾಗೂ ಶಿಷ್ಟಾಚಾರ ಪಾಲಿಸಬೇಕು. ಅಂಗಿ ಅಥವಾ ಕುರ್ತಾ ಇಲ್ಲವೇ ಬ್ಲೇಜರ್ ಧರಿಸಿ ಬರುವ ಮೂಲಕ ಗೌರವ ಕಾಪಾಡಿಕೊಳ್ಳಬೇಕು. ಹಿಂದೆಯೂ ನಿಮಗೆ ಇದನ್ನು ಸೂಚಿಸಲಾಗಿದ್ದರೂ ಮತ್ತೆ ಟೀ-ಶರ್ಟ್ ಧರಿಸಿಕೊಂಡು ಬಂದಿದ್ದೀರಿ. ಇದನ್ನು ಒಪ್ಪಲಾಗದು,'' ಎಂದು ಅಸಮಾಧಾನ ವ್ಯಕ್ತಪಡಿಸಿದರು. ಅದನ್ನು ಒಪ್ಪದ ಚುಡಾಸಮ, ''ಚುನಾವಣೆ ಪ್ರಚಾರದ ವೇಳೆ ಟಿ-ಶರ್ಟ್ ಧರಿಸಿಯೇ ಮತದಾರರ ಬಳಿ ಹೋಗಿದ್ದೆ. ಅವರು ನನ್ನನ್ನು ಗೆಲ್ಲಿಸಿದರು. ಟಿ-ಶರ್ಟ್ ಹಾಕಿಕೊಂಡು ಸದನಕ್ಕೆ ಬರುವುದರಲ್ಲಿ ತಪ್ಪೇನಿದೆ?'' ಎಂದು ಪ್ರಶ್ನಿಸಿದರು. ಇದು ಕೆಲಹೊತ್ತು ವಾಗ್ವಾದಕ್ಕೂ ಎಡೆಮಾಡಿಕೊಟ್ಟಿತ್ತು. ಬಳಿಕ ಸ್ಪೀಕರ್ ಆದೇಶದಂತೆ ಮಾರ್ಷಲ್‌ಗಳು ಚುಡಾಸಮ ಅವರನ್ನು ಸದನದಿಂದ ಹೊರಕ್ಕೆ ಕರೆದೊಯ್ದರು.